
# ಸ್ವಾಮಿ ರಾಮಕೃಷ್ಣಾನಂದರು—ನಾ ಕಂಡಂತೆ

## ಸ್ವಾಮಿ ವಿರಜಾನಂದ

*ಸ್ವಾಮಿ ವಿರಜಾನಂದರ ಈ ನೆನಪುಗಳು ಅಮೂಲ್ಯವಾದವು. ಏಕೆಂದರೆ ಬೇಲೂರು ಮಠ ಸ್ಥಾಪಿತವಾಗುವುದಕ್ಕೆ ಮುಂಚೆ ಮತ್ತು ಶ್ರೀರಾಮಕೃಷ್ಣ ಸಂಘ ಇನ್ನೂ ವಿಧ್ಯುಕ್ತವಾಗಿ ರೂಪುಗೊಳ್ಳುವ ಮುಂಚೆ, ಶ್ರೀರಾಮಕೃಷ್ಣರ ನಿರ್ಯಾಣಾನಂತರ ಬಾರಾನಗರದ 'ದೆವ್ವದ ಮನೆ' ಯಲ್ಲಿ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರು ತೀವ್ರ ವೈರಾಗ್ಯದಿಂದ ಕಠೋರ ಸಾಧನೆ ಮಾಡುತ್ತಿದ್ದ ದೃಶ್ಯ ನಮಗಿಲ್ಲಿ ಸಿಗುವುದು. ಹಾಗೂ ಸ್ವಾಮಿ ರಾಮಕೃಷ್ಣಾನಂದರು ಮದರಾಸಿಗೆ ಬರುವ ಹಿಂದಿನ ಅವರ ವ್ಯಕ್ತಿತ್ವದ ಚಿತ್ರವೂ ನಮಗೆ ದೊರೆಯುವುದು. ಇದನ್ನು ಕನ್ನಡಕ್ಕೆ ಅನುವಾದಿಸಿದವರು ಬೆಂಗಳೂರಿನ ಗಾಂಧೀ ಕೃಷಿವಿಜ್ಞಾನ ಕೇಂದ್ರದಲ್ಲಿ ಸಸ್ಯಸಂಗ್ರಾಹಕ ಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ. ಇ. ವಸಂತಕುಮಾರ*



ಸ್ವಾಮಿ ರಾಮಕೃಷ್ಣಾನಂದರು

ಒಂದು ದಿನ ಮಧ್ಯಾಹ್ನ ೧೮೯೧ರ ಮೊದಲ ಭಾಗದಲ್ಲಿ ನನ್ನ ಕೆಲವು ಸ್ನೇಹಿತರು ಮತ್ತು ಕಾಲೇಜಿಗೆ ಚಕ್ಕರ್ ಹೊಡೆಯುವ ಸಹಪಾಠಿಗಳೊಂದಿಗೆ ನಾನು ಬಾರಾನಗರದ ಮಠಕ್ಕೆ ಹೋದೆ. ನಾವು ಅಲ್ಲಿ ಸ್ವಾಮಿ ರಾಮಕೃಷ್ಣಾನಂದರನ್ನು (ಶಶಿ ಮಹಾರಾಜ್) ಭೇಟಿಯಾದೆವು. ಅವರು ಮತ್ತು ಶ್ರೀರಾಮಕೃಷ್ಣರ ಇತರ ಸಂನ್ಯಾಸಿ ಶಿಷ್ಯರು ನಮ್ಮನ್ನು ಆದರದಿಂದ ಬರಮಾಡಿಕೊಂಡರು ಮತ್ತು ನಾವೇನು ಮಾಡುತ್ತಿರುವೆವು, ಯಾವ ತರಗತಿಯಲ್ಲಿ ಓದುತ್ತಿರುವೆವು, ನಾವು ಎಲ್ಲಿಂದ ಬಂದಿರುವೆವು, ನಮಗೆ ಮಠದ ವಿಷಯ ಹೇಗೆ ತಿಳಿಯಿತು ಮುಂತಾದ ಅನೇಕ ಪ್ರಶ್ನೆಗಳನ್ನು ಕೇಳಿದರು. ನಾಲ್ಕು ಘಂಟೆಗೆ ಪೂಜಾಗೃಹವನ್ನು ತೆರೆಯಲಾಯಿತು. ನಾವು ಶ್ರೀರಾಮಕೃಷ್ಣರ ಭಾವಚಿತ್ರದ ಮುಂದೆ ದೀರ್ಘದಂಡ ಪ್ರಣಾಮ ಮಾಡಿ, ಸ್ವಲ್ಪ ಪ್ರಸಾದವನ್ನು ಸ್ವೀಕರಿಸಿ ಅಮೇಲೆ ಆ ದಿನ ಬೀಳ್ಕೊಂಡೆವು. ಆ ಸಮಯದಿಂದ ನಾನು ಆಗಾಗ್ಗೆ ಮಠಕ್ಕೆ ಹೋಗುತ್ತಿದ್ದೆ.

ಆಗ ಮಠವು ಬಾರಾನಗರದ ಪರಮಾಣಿಕ್ ಘಾಟ್ ರಸ್ತೆಯಲ್ಲಿ ಟಾಕಿಯ ಮುನ್ಷಿಗಳ ದೇವಸ್ಥಾನದ ಕ್ಷೇತ್ರದ ಪಕ್ಕದಲ್ಲಿತ್ತು. ಕಟ್ಟಡ ಹಳೆಯದಾಗಿ ಶಿಥಿಲವಾಗಿತ್ತು. ಮಹಡಿಯ ಮೇಲೆ, ಒಳಗಿನ ಕೋಣೆಗಳಲ್ಲಿ ಇತ್ತು, ಬಾಡಿಗೆಯ ಮಠ. ರಸ್ತೆಯ ಅಂಚಿನಲ್ಲಿದ್ದ ಬಾಗಿಲಿನ ಮೂಲಕ ಹೋದರೆ ಒಂದು ಖಾಲಿ ಅಂಗಳವನ್ನು ದಾಟಿಹೋಗಬೇಕಾಗಿತ್ತು. ನಂತರ ಒಂದು ಮಹಡಿಯನ್ನು ಹತ್ತಿಹೋದರೆ ಒಂದು ದೊಡ್ಡ ಹಜಾರ ಬರುವುದು. ಅದು, ಮೇಲೆ ಮರದ ಪಟ್ಟಿಗಳಿರುವ ಮತ್ತು ಕೆಳಗೆ ಕಂಬಗಳಿರುವ ವರಾಂಡದ ದಕ್ಷಿಣಕ್ಕಿತ್ತು. ನಾನು ಬರುವುದಕ್ಕೆ ಮುಂಚೆ ಈ ಹಜಾರದಲ್ಲಿ ಜನರು ಬಾಡಿಗೆಗೆ ಇದ್ದರು. ನಂತರ ಅದು ಖಾಲಿಯಾಗಿ ಉಳಿದಿತ್ತು. ಒಳಗಡೆ ಇದ್ದ ಮಠದ ಭಾಗ ರಸ್ತೆಗೆ ಕಾಣುತ್ತಿರಲಿಲ್ಲ. ಅದು ಅತ್ಯಂತ ಮರೆಯಾಗಿತ್ತು.

ಸಂಜೆ ಶಶಿ ಮಹಾರಾಜರು ಮೊದಲು ಪೂಜಾಗೃಹದಲ್ಲಿ ಧೂಪ ಹಾಕಿ ನಂತರ ಸಣ್ಣ ಹಜಾರದಲ್ಲಿದ್ದ ಎಲ್ಲ ದೇವದೇವಿಯರ ಪಟಗಳ ಮುಂದೆ ಆರತಿ ಮಾಡುತ್ತಿದ್ದರು. ಒಂದು ಕೈಯಲ್ಲಿ ಮೇಣದ ಬತ್ತಿಯ ದೀಪವನ್ನೂ ಮತ್ತೊಂದು ಕೈಯಲ್ಲಿ ಧೂಪವನ್ನೂ ಹಿಡಿದುಕೊಂಡು ಪಟದಿಂದ ಪಟಕ್ಕೆ, "ಜೈ ಗುರುದೇವ, ಜೈ ಗುರುದೇವ!" ಎಂದು ಉಚ್ಚರಿಸುತ್ತಾ ಮುಂದುವರಿಯುತ್ತಿದ್ದರು. ನಂತರ ಈ ಕೆಲಸವನ್ನು ನನಗೆ ವಿಧಿಸಿದರು.

ಹಜಾರದ ಒಂದು ಪಕ್ಕದಲ್ಲಿ ಒಂದು ಮರದ ಮಂಚ ಇತ್ತು. ಅದರ ಒಂದು ಕಡೆ ಕೆಲವು ಸಂಸ್ಕೃತ, ಬಂಗಾಲಿ ಮತ್ತು ಇಂಗ್ಲಿಷ್ ಪುಸ್ತಕಗಳು ಕ್ರಮವಾಗಿ ಒಂದರ ಮೇಲೊಂದು ಇದ್ದವು. ಮತ್ತೊಂದು ಕಡೆ ಕೆಲವು ಸಂಗೀತ ವಾದ್ಯಗಳು ಇಡಲ್ಪಟ್ಟಿದ್ದವು. ' ತಂಬೂರಿಯೊಂದನ್ನು ಹತ್ತಿರದ ಗೋಡೆಯ ಮೇಲೆ ಮೊಳೆಯಿಂದ ತೂಗುಹಾಕಿರುವುದನ್ನು ನೋಡಬಹುದಿತ್ತು. ಹಜಾರವು ಸಂನ್ಯಾಸಿಗಳಿಗೆ ಮಲಗುವ ಸ್ಥಳವಾಗಿತ್ತು. ಅದು ಆಗಂತುಕರೊಡನೆ ಮತ್ತು ಭಕ್ತರೊಡನೆ ಮಾತನಾಡುವ

ಸ್ಥಳವೂ ಆಗಿತ್ತು. ಒಂದು ಮಾತಿನಲ್ಲಿ ಹೇಳುವುದಾದರೆ, ಮಠದ ಎಲ್ಲ ಆವಶ್ಯಕತೆಗಳನ್ನೂ ಅದು ಪೂರೈಸುತ್ತಿತ್ತು. ಒಂದು ಚಾಪೆ ಮತ್ತು ಒಂದು ಸಣ್ಣ ದಿಂಬೇ ಪ್ರತಿಯೊಬ್ಬ ಸಾಧುವಿನ ಹಾಸಿಗೆಯಾಗಿರುತ್ತಿತ್ತು. ಚಾಪೆಗಳನ್ನು ಒಂದರ ಪಕ್ಕ ಮತ್ತೊಂದು ಸೇರಿಸಿ ಹಾಕಲಾಗುತ್ತಿತ್ತು. ಕೆಲವು ಚಾಪೆಗಳು ಹೆಚ್ಚಿಗೆ ಇದ್ದವು. ಅವನ್ನು ಅತಿಥಿಗಳಿಗೆ ಅಥವಾ ಮತ್ತೆಲ್ಲಾದರೂ ಹಾಕಲು ಇಟ್ಟಿದ್ದರು. ಕೆಲವು ವೇಳೆ ಆಗಂತುಕರು ಅವನ್ನು ಉಪಯೋಗಿಸದೆ ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದರು.

ಶ್ರೀರಾಮಕೃಷ್ಣರ ಭಾವಚಿತ್ರವನ್ನು ಪೂಜಾಗೃಹದ ಮಧ್ಯದಲ್ಲಿ ನೆಲದಲ್ಲಿ ಒಂದು ಹಾಸಿಗೆಯ ಮೇಲೆ ಇಟ್ಟಿದ್ದರು. ಹಾಸಿಗೆಯು ಒಂದು ಮೆತ್ತೆ, ಅದರ ಮೇಲೆ ಒಂದು ಬೆಚ್ಚನೆಯ ಹೊದಿಕೆ, ಮತ್ತು ಅದರ ಮೇಲೊಂದು ತೆಳ್ಳನೆಯ ಹೊದಿಕೆ. ಭಾವಚಿತ್ರದ ಹಿಂದೆ ಒಂದು ದಿಂಬು ಮತ್ತು ಎರಡು ಪಕ್ಕಗಳಲ್ಲಿ ಎರಡು ದಿಂಬುಗಳು ಇದ್ದವು. ಹಾಸಿಗೆಯ ಒಂದು ಕಡೆ ಬೀಗ ಹಾಕಿದ್ದ ಒಂದು ತಾಮ್ರದ ಭರಣಿಯಲ್ಲಿ ಶ್ರೀರಾಮಕೃಷ್ಣರ ಅವಶೇಷವನ್ನು ಇಡಲಾಗಿತ್ತು, ಮತ್ತು ಅವರ ಪವಿತ್ರ ಪಾದುಕೆಗಳನ್ನು ತಗ್ಗಾಗಿದ್ದ ಮರದ ಪೀಠದ ಮೇಲೆ ಇಟ್ಟಿದ್ದರು. ಶಶಿ ಮಹಾರಾಜರು ಶ್ರೀರಾಮಕೃಷ್ಣರ ನಿತ್ಯಪೂಜೆಯನ್ನು ಪೂಜಾ ಸಾಮಗ್ರಿಗಳ ಮುಂದೆ ಕುಳಿತು ಏಕಾಗ್ರತೆಯಿಂದ ಮಾಡುತ್ತಿದ್ದರು. ಆರತಿಯ ಸಮಯದಲ್ಲಿ, ವಾರಾಣಸಿಯಲ್ಲಿ ಸಂಧ್ಯಾಪೂಜೆಯ ಸಮಯದಲ್ಲಿ ಉಚ್ಚರಿಸುವ ವಿಶ್ವನಾಥ ಸ್ತೋತ್ರವನ್ನು ಹಾಡಲಾಗುತ್ತಿತ್ತು: **ಜೈ ಶಿವ ಓಂಕಾರ, ಭಜ ಶಿವ ಓಂಕಾರ.**

ಓಹ್! ಶಶಿ ಮಹಾರಾಜರು ಮಾಡುತ್ತಿದ್ದ ಆರತಿ ಎಷ್ಟು ಅದ್ಭುತವಾಗಿತ್ತು! ಧೂಪದ ಹೊಗೆಯಿಂದ ಆವೃತವಾಗಿ, ನಗಾರಿ ಮತ್ತು ತಾಳಗಳ ಸಂಗೀತರವದಲ್ಲಿ ಮುಳುಗಿ ಅವರು ಆರತಿಯ ಅಂತ್ಯದಲ್ಲಿ ಚಾಮರವನ್ನು ಬೀಸುತ್ತಿದ್ದರು. ಭಗವದ್ಭಾವಭರಿತರಾಗಿ, ತಲ್ಲಣಗೊಳಿಸುವ ಉಚ್ಚಸ್ವರದಲ್ಲಿ ಆನಂದೋತ್ಸಾಹದಿಂದ, "ಜೈ ಗುರುದೇವ, ಶ್ರೀ ಗುರುದೇವ" ಎಂದು ಉಚ್ಚರಿಸುತ್ತಿದ್ದರು. ತಾಂಡವ-ಶಿವನ ನೃತ್ಯದಂತೆ ಮೈಮರೆತು ಭಾವಪರವಶರಾಗಿ ಲಯಬದ್ಧವಾಗಿ ಹೆಜ್ಜೆಯಿಡುತ್ತ ಕೋಣೆಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತಿದ್ದರು. ಅದನ್ನು ನೋಡಿದ ನನ್ನಂತಹವರ ಹೃದಯದಲ್ಲಿ ಎಂತಹ ಆಧ್ಯಾತ್ಮಿಕ ಭಾವನೆಯ ರೋಮಾಂಚನ, ಉಕ್ಕೇರುವ ಪ್ರೀತಿಯ ಅನನ್ಯ ಭಾವನೆ ಪ್ರವಹಿಸುತ್ತಿತ್ತು ಎಂಬುದನ್ನು ವಿವರಿಸುವುದಕ್ಕಿಂತ ಊಹಿಸಿಕೊಳ್ಳುವುದು ಮೇಲು! ಇಡೀ ಕಟ್ಟಡವೇ ದೈವೀಕಂಪನದಿಂದ ಅನುರಣಿತವಾದಂತಿತ್ತು! ಪೂಜಿಸುತ್ತಿರುವವರ ಮುಖ ದೈವೀಕಾಂತಿಯಿಂದ ಹೊಳೆಯುತ್ತ ಕೆಂಪಾಗಿ ಮುಖದಿಂದ ರಕ್ತ ಚಿಮ್ಮುವುದೇನೊ ಎನ್ನುವಂತೆ ಕಾಣುತ್ತಿತ್ತು. ಅವರು ಅಗ್ನಿದೇವತೆಯೇ ರೂಪವೆತ್ತಿದ್ದಂತೆ ಕಾಣುತ್ತಿದ್ದರು. ಕೂಗುವುದು ಮತ್ತು ನರ್ತನಕ್ಕೆ ಕೊನೆಯಿರಲಿಲ್ಲ. ಡಮರುವಾದಕರಿಗೆ ಸುಸ್ತಾಗಿ ನಿಲ್ಲಿಸುತ್ತಿದ್ದರು. ಪ್ರೇಕ್ಷಕರು ಪಕ್ಕದ ಕೋಣೆಯಿಂದ ಎಲ್ಲವನ್ನೂ ನೋಡುತ್ತ "ಜೈ ಗುರುದೇವ, ಜೈ ಗುರುದೇವ" ಎಂಬ ಕೂಗಿಗೆ ದನಿ ಸೇರಿಸುತ್ತಿದ್ದರು. ಅವರೂ ಕೂಡ ಆವೇಶದಿಂದ ಕುಣಿಯುತ್ತಿದ್ದರು. ನಂತರ ಎಲ್ಲರೂ ಶ್ರೀರಾಮಕೃಷ್ಣರ ಭಾವಚಿತ್ರಕ್ಕೆ ನಮಸ್ಕಾರ ಮಾಡಿ ಒಟ್ಟಿಗೆ ಗುರುಗೀತೆಯನ್ನು ಹೇಳುತ್ತಿದ್ದರು. ಅನಂತರ ಕೆಲವು ಸ್ತೋತ್ರಗಳನ್ನು ಹೇಳುತ್ತಿದ್ದರು. ನಂತರ, ಸ್ವಾಮಿ ಅಭೇದಾನಂದರು ರಚಿಸಿರುವ ಸಂಸ್ಕೃತ ಗೀತೆಯ ಕೊನೆಯ ಭಾಗವನ್ನು ಹೇಳಲಾಗುತ್ತಿತ್ತು:

ನಿರಂಜನಂ ನಿತ್ಯಮನಂತರೂಪಂ
ಭಕ್ತಾನುಕಂಪಾತ್ ಧೃತವಿಗ್ರಹಂ ವೈ ।
ಈಶಾವತಾರಂ ಪರಮೇಶಮೀಡ್ಯಂ
ತಂ ರಾಮಕೃಷ್ಣಂ ಶಿರಸಾ ನಮಾಮಿ ॥

"ಕಲ್ಮಷರಹಿತನೂ ನಿತ್ಯನೂ ಅನಂತರೂಪವುಳ್ಳವನೂ ಭಕ್ತರ ಮೇಲಿನ ಅನುಕಂಪದಿಂದ ದೇಹಧಾರಣೆ ಮಾಡಿದವನೂ ಭಗವದವತಾರನೂ ಪರಮೇಶನೂ ಆರಾಧ್ಯನೂ ಆದ ರಾಮಕೃಷ್ಣರಿಗೆ ಶಿರಬಾಗಿ ನಮಸ್ಕರಿಸುತ್ತೇನೆ." ಕೊನೆಗೆ, "ಜೈ ಶ್ರೀ ಗುರುಮಹಾರಾಜ್‌ಜೀ ಕೀ ಜೈ" ಎಂಬ ಜಯಘೋಷದೊಡನೆ ಆರತಿ ಮುಗಿಯುತ್ತಿತ್ತು.

ಅಂದಿನ ದಿನಗಳಲ್ಲಿ ಅಡಿಗೆಯವನೊಬ್ಬನೇ ಮಠದಲ್ಲಿದ್ದ ಆಳು. ಕುಡಿಯುವುದಕ್ಕೆ ಮತ್ತು ಅಡುಗೆಗೆ ಬೇಕಾದ ನೀರನ್ನು (ಸುಮಾರು ಎರಡು ಫರ್ಲಾಂಗ್‌ಗಳ ದೂರದಿಂದ) ಗಂಗಾನದಿಯಿಂದ ತರಲು ಒಬ್ಬ ಆಳನ್ನು ಗೊತ್ತುಮಾಡಿದರು. ಅವನು ನಿಗದಿತ ಸಮಯದಲ್ಲಿ ಬೊಂಬಿಗೆ ಇಳಿಬಿಟ್ಟಿದ್ದ ಮಣ್ಣಿನ ಮಡಕೆಗಳಲ್ಲಿ ನೀರನ್ನು ಹೊತ್ತು ತರುತ್ತಿದ್ದನು. ಪೂಜೆ, ಗುರು ಮಹಾರಾಜರ ಸೇವೆಗೆ ಸಂಬಂಧಪಟ್ಟ, ದೇವರ ಮನೆಯ ಕೆಲಸವನ್ನೆಲ್ಲಾ ಶಶಿ ಮಹಾರಾಜರೇ ಮಾಡುತ್ತಿದ್ದರು. ಅಲ್ಲದೆ, ಸಾಮಾನು ಕೊಂಡುತರುವುದು, ಕಸಗುಡಿಸುವುದು, ತರಕಾರಿ ಹೆಚ್ಚುವುದು, ಪೂಜಾಪಾತ್ರೆಗಳನ್ನು ತೊಳೆಯುವುದು, ಕೊಳದಿಂದ ಕೈಕಾಲು ತೊಳೆಯಲು ಬೇಕಾದ ನೀರನ್ನು ತರುವುದು, ದೀಪಗಳನ್ನು ಸ್ವಚ್ಛಗೊಳಿಸುವುದು ಮುಂತಾದುವನ್ನೂ ಮಾಡುತ್ತಿದ್ದರು. ಉಳಿದವರು ಕೆಲವು ವೇಳೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡುತ್ತಿದ್ದರಾದರೂ ಈ ಎಲ್ಲ ಕೆಲಸಗಳನ್ನೂ ಒಬ್ಬರೇ ಮಾಡುತ್ತಿದ್ದರು. ನಾನು ಸೇರಿಕೊಂಡ ಮೇಲೆ ಈ ಎಲ್ಲ ಕೆಲಸಗಳಲ್ಲಿಯೂ ಅವರಿಗೆ ನೆರವಾಗುತ್ತಿದ್ದೆನು. ನೈವೇದ್ಯ ಮಾಡಿದ ಮೇಲೆ, ಎಲ್ಲರೂ ಊಟ ಮಾಡಿದ ನಂತರ, ಅವರು ಪೂಜಾಗೃಹಕ್ಕೆ ಹೋಗಿ ಮಲಗಿಸಿದ ಶ್ರೀರಾಮಕೃಷ್ಣರ ಭಾವಚಿತ್ರಕ್ಕೆ ಒಂದು ದೊಡ್ಡ ತಾಳೆಯ ಗರಿಯಿಂದ ಸಂಜೆ ನಾಲ್ಕು ಗಂಟೆಯವರೆಗೂ ಬೇಸಿಗೆ ಕಾಲದಲ್ಲಿ ಗಾಳಿ ಬೀಸುತ್ತಿದ್ದರು. ಮಠವನ್ನು ಆಲಂಬಜಾರಿಗೆ ವರ್ಗಾಯಿಸಿದ ನಂತರವೂ ಅವರು ಈ ಅಭ್ಯಾಸವನ್ನು ಮುಂದುವರೆಸಿದರು. ಈ ಕೆಲಸದಲ್ಲಿಯೂ ಕೂಡ ನಾನು ಸರದಿಯಂತೆ ಅವರಿಗೆ ವಿರಾಮ ಕೊಡುತ್ತಿದ್ದೆ. ಮಠದ

ಸದಸ್ಯರು ತಮ್ಮ ಕಾಲದ ಬಹುಭಾಗವನ್ನು ಜಪ, ಧ್ಯಾನ ವೇದೋಪನಿಷತ್ತುಗಳ ಅಧ್ಯಯನ ಮತ್ತು ಚರ್ಚೆಯಲ್ಲಿ ಕಳೆಯುತ್ತಿದ್ದರು. ಅವರು ಒಬ್ಬರೇ ಅಥವಾ ಒಟ್ಟಿಗೆ ಭಕ್ತಿಗೀತೆಗಳನ್ನೂ ಹಾಡುತ್ತಿದ್ದರು.

ಓ! ಎಂತಹ ವೈರಾಗ್ಯಜೀವನವನ್ನು ಸಾಧುಗಳು ನಡೆಸುತ್ತಿದ್ದರು. ಶಾರದಾ ಮಹಾರಾಜರು (ಸ್ವಾಮಿ ತ್ರಿಗುಣಾತೀತಾನಂದರು) ಕೆಳಗಡೆ ಹೊರ ಅಂಗಳದಲ್ಲಿ ಒಂಟಿಯಾಗಿದ್ದ ಜೌಗು ಹಿಡಿದ ಕತ್ತಲು ಕೋಣೆಯೊಂದರಲ್ಲಿ ಅನೇಕ ತಿಂಗಳು ಮೌನ ವ್ರತದಲ್ಲಿ ಒಂದು ಬಗೆಯ ತೀವ್ರವಾದ ಆಧ್ಯಾತ್ಮಿಕ ಸಾಧನೆ ಮಾಡಿದರು. ಅವರ ಆಹಾರ ಒಂದೇ ಒಂದು ಬಾಳೆಯ ಹಣ್ಣು ಮತ್ತು ಒಂದೆರಡು ಲೋಟ ನೀರು ಆಗಿತ್ತು. ಅವರು ಎಷ್ಟರ ಮಟ್ಟಿಗೆ ಜಪ ಮತ್ತು ಧ್ಯಾನದಲ್ಲಿ ಮಗ್ನರಾಗಿದ್ದರೆಂದರೆ ಅವರು ಜನರ ಕಣ್ಣಿಗೆ ಕಾಣಿಸುವುದು ವಿರಳವಾಗಿತ್ತು.

ನಾವು ಮಠಕ್ಕೆ ಭೇಟಿಯಿತ್ತ ಸಮಯದಲ್ಲಿ ಕೊಲ್ಕತಾದ ಆಹಿರಿತೊಲದಿಂದ ಇನ್ನೊಂದು ಗುಂಪು ಯುವಕರೂ ಬಂದರು. ಆ ಗುಂಪಿನಲ್ಲಿ ಕನಾಯ್ ಮತ್ತು ನಂದ ಮೊದಲು ಬಂದರು. ನಿವಾರಣ್, ಚಂದ್ರ, ಕೃಷ್ಣಲಾಲ್ ಮತ್ತು ಇತರರು ನಂತರ, ಅವರಾದ ಮೇಲೆ ಬಂದರು. ಮಠಕ್ಕೆ ಬರುತ್ತಿದ್ದ ಯುವಕರ ಮುಖ್ಯವಾದ ಕೆಲಸ ಮತ್ತು ಉದ್ದೇಶವೆಂದರೆ ಸಾಧುಗಳಿಗೆ ಮಠದ ಕೆಲಸಗಳಲ್ಲಿ ನೆರವು ನೀಡುವುದಾಗಿತ್ತು. ಅದು ಅಂದು ರೂಢಿಯಲ್ಲಿದ್ದ ಅಭ್ಯಾಸ. ಅವರು ಮೊದಲು, ಯಾವ ಕೆಲಸಗಳನ್ನು ಮಾಡಬೇಕಾಗಿದೆ ಎಂದು ತಿಳಿದುಕೊಂಡು ತಕ್ಷಣವೇ ಅವನ್ನು ಮಾಡತೊಡಗುತ್ತಿದ್ದರು. ಇಡೀ ಸಮಯ ಒಂದಲ್ಲ ಒಂದು ಕೆಲಸ ಮಾಡುತ್ತಿದ್ದರು. ಒಬ್ಬ ಹುಡುಗ ಹೆಚ್ಚು ಕೆಲಸ ಮಾಡಿದಷ್ಟೂ ಅವನಿಗೆ ಹೆಚ್ಚು ಸಂತೋಷವಾಗುತ್ತಿತ್ತು. ಈ ವಿಷಯದಲ್ಲಿ ಶಶಿ ಮಹಾರಾಜರು ಅವರ ನಾಯಕರು ಮತ್ತು ಮಾರ್ಗದರ್ಶಿಗಳು. ಆದರ್ಶದಂತೆ ಅನುಕರಿಸಲು ಅವರು ಒಂದು ಜೀವಂತ ಮತ್ತು ಪ್ರಾಯೋಗಿಕ ಉದಾಹರಣೆಯಾಗಿದ್ದರು. ಆ ಹುಡುಗರು ಸಂತೋಷವಾಗಿ ಮಾಡಲು ಆಗುತ್ತಿದ್ದ ಕೆಲಸಗಳನ್ನು ಅವರಿಗೆ ವಹಿಸುತ್ತಿದ್ದರು. ನಿರ್ವಾಣ ದತ್ತ ಎಂಬ ಒಬ್ಬ ಯುವಕನಿಗೆ ಸಂಗೀತದಲ್ಲಿ ಪ್ರತಿಭೆ ಇತ್ತು. ಅವನು ಶ್ರೀರಾಮಕೃಷ್ಣರ ಹೆಸರಿನಲ್ಲಿ ಹೊಸ ಹಾಡುಗಳನ್ನು ರಚಿಸುತ್ತಿದ್ದನು. ಅವನು ಮಠಕ್ಕೆ ಬಂದಾಗಲೆಲ್ಲ ಅವನ್ನು ಹಾಡಿ, ತನ್ನ ಸ್ನೇಹಿತರೊಂದಿಗೆ ಮೃದಂಗ, ತಾಳಗಳೊಡನೆ ಕೀರ್ತನೆ ಮಾಡುತ್ತಿದ್ದನು. ಕೆಲವು ವೇಳೆ ಅವನು ಬಹಳ ಭಾವದಿಂದ ನರ್ತಿಸುತ್ತಾ ಹಾಡುತ್ತಿದ್ದನು. ಶಶಿ ಮಹಾರಾಜರೂ ಕೂಡ ಕೆಲವು ವೇಳೆ ಅದರಲ್ಲಿ ಭಾಗವಹಿಸುತ್ತಿದ್ದರು.

ಸಾಧುಗಳಿಗೆ, ಅವರು ಮಠದಲ್ಲಿ ಧರಿಸುತ್ತಿದ್ದ ಕೌಪೀನದ ಹೊರತಾಗಿ, ಬಹಳ ಕಡಮೆ ವಸ್ತ್ರಗಳಿದ್ದವು. ಅವರ ಐದು ಮೊಳದ ಪಂಚೆಗಳು ಒಂದು ಹಗ್ಗದ ಮೇಲೆ ಹಾಕಲ್ಪಟ್ಟಿದ್ದವು. ಯಾರಾದರೂ ಹೊರಗಡೆ ಹೋಗಬೇಕಾದಾಗ ಅವುಗಳಲ್ಲಿ ಒಂದನ್ನು ಉಪಯೋಗಿಸುತ್ತಿದ್ದರು. ಅವನ್ನು ಒಳಗಡೆ ಇಟ್ಟುಕೊಳ್ಳಲು ಅವರಿಗೆ ಪೆಟ್ಟಿಗೆಯ ಆವಶ್ಯಕತೆ ಇರಲಿಲ್ಲ. ಉಗ್ರಾಣದಲ್ಲಿ ಅಕ್ಕಿ ಮತ್ತು ಬೇಳೆಯನ್ನು ದೊಡ್ಡ ಮಣ್ಣಿನ ಪಾತ್ರೆಗಳಲ್ಲಿ, ಮಡಕೆಗಳಲ್ಲಿ ಮತ್ತು ಜಾಡಿಗಳಲ್ಲಿ ಒಂದರ ಮೇಲೊಂದು ಇಟ್ಟಿದ್ದರು. ಒಂದೆರಡು ರೂಪಾಯಿಗಳು ಮತ್ತು ಸ್ವಲ್ಪ ಚಿಲ್ಲರೆ ಕಾಸುಗಳನ್ನು ಶ್ರೀರಾಮಕೃಷ್ಣರ ಬಟ್ಟೆಗಳನ್ನಿಟ್ಟಿದ್ದ ನೆಲದ ಮೇಲಿದ್ದ ತಗಡಿನ ಡಬ್ಬದಲ್ಲಿ ಇಟ್ಟಿದ್ದರು.

ಆವಶ್ಯಕತೆ ಬಂದಂತೆ ಇದರಿಂದ ಹಣ ತೆಗೆದುಕೊಂಡು ಖರೀದಿಸುತ್ತಿದ್ದರು. ಲೆಕ್ಕ ಇಡುವ ತೊಂದರೆ ಇರಲಿಲ್ಲ. ನಾನು ಸೇರಿಕೊಳ್ಳುವುದಕ್ಕೆ ಮುಂಚೆ ಒಬ್ಬ ಯುವಕ ಒಮ್ಮೆ ಮಠದಲ್ಲಿ ಬ್ರಹ್ಮಚಾರಿಯಾಗಿ ಇದ್ದನು. ಒಂದು ದಿನ ಆ ಚಿಲ್ಲರೆ ಹಣವನ್ನು ತೆಗೆದುಕೊಂಡು ಪರಾರಿಯಾದನು! ಶ್ರೀರಾಮಕೃಷ್ಣರಿಗೆ ನೈವೇದ್ಯಕ್ಕಾಗಿ, ಪೂಜೆಯಾದ ಮೇಲೆ ಮಧ್ಯಾಹ್ನ ನಿವೇದಿಸುವ ಸ್ವಲ್ಪ ಕಲ್ಲುಸಕ್ಕರೆಯನ್ನು ಬಿಟ್ಟು, ಎರಡು ಸರಳ ಭೋಜನಗಳನ್ನು ತಯಾರಿಸಲಾಗುತ್ತಿತ್ತು. ಆಗ ಟೀ ತೆಗೆದುಕೊಳ್ಳುವ ಪದ್ಧತಿ ಇರಲಿಲ್ಲ. ಅದನ್ನು ನಂತರ ಆಲಂಬಜಾರ್ ಮಠದಲ್ಲಿ ಪ್ರಾರಂಭಿಸಲಾಯಿತು. ಅಲ್ಲಿದ್ದ ಕೆಲವರಿಗೆ ಮೇಲಿಂದ ಮೇಲೆ ಮಲೇರಿಯಾ ಜ್ವರ ಮತ್ತು ಶೀತ ಕಾಡಲು ಪ್ರಾರಂಭವಾಯಿತು. ಅವರುಗಳೇ ಟೀಯನ್ನು ಒಂದು ಔಷಧದಂತೆ ಪ್ರಾರಂಭಿಸಿದವರು.

ಆಗಾಗ್ಗೆ ಸಾಧುಗಳು ಜತೆಯಾಗಿ ಬೇರೆ ಬೇರೆ ಗುಂಪುಗಳಲ್ಲಿ ಪವಿತ್ರ ತೀರ್ಥಸ್ಥಳಗಳಿಗೆ ಯಾತ್ರೆ ಹೋಗುತ್ತಿದ್ದರು. ಶಶಿ ಮಹಾರಾಜರೊಬ್ಬರೇ ಇದಕ್ಕೆ ವಿನಾಯಿತಿ. ಠಾಕೂರರನ್ನು (ಶ್ರೀರಾಮಕೃಷ್ಣರು) ಮತ್ತು ಅವರ ಮಕ್ಕಳನ್ನೂ ಮಠದಲ್ಲಿಯೇ ಬಿಟ್ಟು ಬೇರೆ ಎಲ್ಲಿಗೂ ಹೋಗುವುದರ ಆಲೋಚನೆಯನ್ನು ಅವರಿಗೆ ಸಹಿಸುವುದಕ್ಕಾಗುತ್ತಿರಲಿಲ್ಲ. ಹನ್ನೆರಡು ವರ್ಷಗಳ ದೀರ್ಘಕಾಲದಲ್ಲಿ ಅವರು ಕೆಲವು ಗಂಟೆಗಳ ಮಟ್ಟಿಗೂ ಕಲ್ಕತ್ತಕ್ಕೂ ಹೋಗಿರಲಿಲ್ಲ! ಒಂದೇ ಒಂದು ಸಲ, ವಿಶೇಷ ಕಾರಣಕ್ಕಾಗಿ, ಯಾರಿಗೂ ತಿಳಿಸದೆ ಅವರು ಹೋಗಿದ್ದರು. ಅದು ಎಲ್ಲಾ ಗುರುಭಾಯಿಗಳ ಮನಸ್ಸಿನಲ್ಲಿ ಒಂದು ದೊಡ್ಡ ತಳಮಳ ಮತ್ತು ಆತಂಕವನ್ನೇ ಎಬ್ಬಿಸಿತು. ತೀವ್ರ ಆತಂಕದಿಂದ ಅವರೆಲ್ಲ ಸ್ವಾಮಿಗಳನ್ನು ಹುಡುಕಲಾರಂಭಿಸಿದರು. ಅದೃಷ್ಟವಶಾತ್ ಅವರನ್ನು ಮಾರನೆಯ ದಿನ ದಕ್ಷಿಣೇಶ್ವರದಲ್ಲಿ ಕಂಡು ಅವರ ಮನವೊಲಿಸಿ ಮಠಕ್ಕೆ ಹಿಂತಿರುಗಿ ಕರೆದುಕೊಂಡು ಬಂದರು. ಮತ್ತೊಂದು ಸಂದರ್ಭದಲ್ಲಿ ಒಂದು ಸಾರ್ವಜನಿಕ ಸಮಾರಂಭಕ್ಕೆ ಕಲ್ಕತ್ತೆಗೆ ಹೋಗಬೇಕಾಯಿತು. ಅದರಲ್ಲಿ ಸ್ವಾಮೀಜಿಯವರು ಪಾಶ್ಚಾತ್ಯ ದೇಶಗಳಿಂದ ಹಿಂತಿರುಗಿದಾಗ ಅವರಿಗೆ ಒಂದು ಸ್ವಾಗತ ಬಿನ್ನವತ್ತಳೆಯನ್ನು ನೀಡಲಾಯಿತು. ಸ್ವಾಮೀಜಿಯವರು ಸೀಲ್ ಅವರ ತೋಟದ ಮನೆಯಲ್ಲಿದ್ದಾಗ ಶಶಿ ಮಹಾರಾಜರು ಆಗಾಗ್ಗೆ ಅಲ್ಲಿಗೆ ಹೋಗಿ ಸ್ವಾಮೀಜಿಯವರ ಉಲ್ಲಾಸಕರ ಸಂಗದಲ್ಲಿ

ಕೆಲವು ಗಂಟೆಗಳನ್ನು ಕಳೆದು ಹಿಂತಿರುಗುತ್ತಿದ್ದರು.

ಮಠದ ಸದಸ್ಯರು ಆಧ್ಯಾತ್ಮಿಕ ಸಾಧನೆಯ ಬಗ್ಗೆ ಕಂಕಣಬದ್ಧರಾಗಿದ್ದರು. ಒಂದು ದಿನದಲ್ಲಿ ಮೂರು ಸಲ, ಬೆಳಗ್ಗೆ, ಮಧ್ಯಾಹ್ನದ ಸ್ನಾನಾನಂತರ, ಮತ್ತು ಸಂಜೆ ನಿಯಮಿತವಾಗಿ ಹಲವು ಗಂಟೆಗಳು ಧ್ಯಾನ ಮತ್ತು ಪ್ರಾರ್ಥನೆಯಲ್ಲಿ ಕಳೆಯುತ್ತಿದ್ದರು. ಕೆಲವರು ರಾತ್ರಿವೇಳೆಯಲ್ಲೂ ಗುಪ್ತವಾಗಿ, ಇತರರಿಗೆ ತಿಳಿಯದಂತೆ, ತಮ್ಮ ಹಾಸಿಗೆಯ ಮೇಲೆ ಕುಳಿತು ಸಾಧನೆಗಳನ್ನು ಮಾಡುತ್ತಿದ್ದರು. ಮತ್ತೆ ಕೆಲವರು ಸದ್ದಿಲ್ಲದೆ ಮಧ್ಯರಾತ್ರಿಯಲ್ಲಿ ಬಾರಾನಗರದ ಸ್ಮಶಾನಕ್ಕೆ ಹೋಗಿ ಮುಂಜಾನೆಯವರೆಗೆ ಗಾಢ ಧ್ಯಾನದಲ್ಲಿರುತ್ತಿದ್ದರು. ಭಾಷ್ಯಗಳ ನೆರವಿನಿಂದ ಪ್ರಸ್ಥಾನತ್ರಯಗಳ ಸ್ವತಂತ್ರ ಅಧ್ಯಯನ ಇನ್ನು ಕೆಲವು ಆಶ್ರಮವಾಸಿಗಳ ದಿನಚರಿಯ ಅಂಗವಾಗಿತ್ತು. ವಾದಾಸ್ಪದ ವಿಷಯಗಳು ಬಂದಾಗ ಅವರು ಕೆಲವು ವೇಳೆ ಇತರರೊಡನೆ ಬಿಸಿ ಚರ್ಚೆ ಅಥವಾ ಜಿಜ್ಞಾಸೆಯಲ್ಲಿ ತೊಡಗುತ್ತಿದ್ದರು.

ಸ್ವಾಮೀಜಿಯವರು ಅಮೆರಿಕದಿಂದ ಹಿಂತಿರುಗಿದಾಗ ಮಠ ಆಲಂಬಜಾರಿನಲ್ಲಿತ್ತು. ಕೆಲವು ವರ್ಷಗಳ ಕಾಲ ನಾನು ಬೃಂದಾವನದಲ್ಲಿ ಬಾಬುರಾಮ್ ಮಹಾರಾಜರ (ಸ್ವಾಮಿ ಪ್ರೇಮಾನಂದರ) ಪವಿತ್ರ ಸಂಗದಲ್ಲಿ ತಪಸ್ಸಿನಲ್ಲಿದ್ದೆ. ಸ್ವಾಮೀಜಿಯವರು ಹಿಂತಿರುಗಿದ ಕೆಲವು ದಿನಗಳ ನಂತರ ನಾನು ಬಾಬುರಾಮ್ ಮಹಾರಾಜರೊಂದಿಗೆ ಆಲಂಬಜಾರ್ ಮಠಕ್ಕೆ ಬಂದೆ. ಶಶಿ ಮಹಾರಾಜರು ತಮ್ಮಷ್ಟಕ್ಕೆ ತಾವು ಅನನ್ಯ ಭಕ್ತಿಯಿಂದ ಮತ್ತು ಅಚಲ ಶ್ರದ್ಧೆಯಿಂದ ತಾವಾಗಿ ಕೈಗೊಂಡ ಶ್ರೀರಾಮಕೃಷ್ಣರ ಪೂಜೆ ಮತ್ತು ಸಾಧುಗಳ ಸೇವೆಯನ್ನು ಮಾಡುತ್ತಿದ್ದರು. ಅವರು ಮಾನುಷಶಕ್ತಿಗೆ ಮೀರಿದ ಸ್ಫೂರ್ತಿ, ಉತ್ಸಾಹಗಳಿಂದ ದುಡಿಯುತ್ತಿದ್ದರು. ಅವರು ಯಾವಾಗಲೂ ಉನ್ನತ ಆಧ್ಯಾತ್ಮಿಕ ಭಾವದಲ್ಲಿರುತ್ತಿದ್ದರು.

ಓಹ್! ಭಗವಂತನ ಪೂಜೆಯಲ್ಲಿ ಅವರು ಎಂತಹ ಶ್ರದ್ಧೆ, ಎಂತಹ ತನ್ಮಯತೆ, ಎಂತಹ ಉನ್ಮತ್ತತೆಯನ್ನು ಅನುಭವಿಸುತ್ತಿದ್ದರು! ಅದನ್ನು ಯಾರು ನೋಡಿಲ್ಲವೊ ಅವರಿಗೆ ಅದು ಕಲ್ಪನಾತೀತ. ಈ ಪೂಜೆಯ ವಿಷಯದಲ್ಲಿ ಅತ್ಯಲ್ಪ ದೋಷ ಅಥವಾ ಸ್ವಲ್ಪ ವಿಳಂಬವನ್ನೂ ಅವರಿಗೆ ಸಹಿಸಲಾಗುತ್ತಿರಲಿಲ್ಲ. ಪ್ರತಿಯೊಂದೂ ಹೊತ್ತಿಗೆ ಸರಿಯಾಗಿ ಅತ್ಯಂತ ಸಮರ್ಪಕವಾಗಿ ಇರಬೇಕಾಗುತ್ತಿತ್ತು. ಅದು ಅವರ ಆಗ್ರಹವಾಗಿತ್ತು. ನಾನು ಹೃದಯಪೂರ್ವಕವಾಗಿ ಸಂಪೂರ್ಣ ಮನಸ್ಸಿನಿಂದ ನನ್ನ ಮಹತ್ ಶಕ್ತಿಯಿಂದ ಕೆಲಸ ಮಾಡುತ್ತಿದ್ದೆ. ಪೂಜಾಗೃಹದ ಕರ್ತವ್ಯಗಳನ್ನೆಲ್ಲಾ ನಾನು ಎಷ್ಟು ಚೆನ್ನಾಗಿ ಮಾಡಬಹುದೊ ಅಷ್ಟು ಚೆನ್ನಾಗಿ ನಿರ್ವಹಿಸುತ್ತಿದ್ದೆ. ಆದರೂ ಅವರ ಬೈಗಳಿಂದ ನಾನು ಕಣ್ಣೀರು ಹಾಕದ ದಿನವಿಲ್ಲ. ನಾನು ಅವರ ದೃಷ್ಟಿ ಬೀಳದಂತೆ ಮುಖವನ್ನು ಅತ್ತ ತಿರುಗಿಸಿ ಅಳುತ್ತಿದ್ದೆ. ಬಟ್ಟೆಯಿಂದ ಕಣ್ಣೀರನ್ನು ಒರೆಸಿಕೊಂಡು ಕೈಗಳಿಂದ ಹಣ್ಣನ್ನು ಬಿಡಿಸುತ್ತಿದ್ದೆ. ಆ ಕಡೆ, ಈ ಕಡೆ ಓಡಾಡುತ್ತ ನನ್ನ ಪಾಲಿನ ಕೆಲಸವನ್ನು ಎಷ್ಟು ಬೇಗನೆ ಮಾಡಬಹುದಿತ್ತೊ ಅಷ್ಟು ಬೇಗ ಮಾಡಿ ಮುಗಿಸುತ್ತಿದ್ದೆ. ಆದರೆ, ದುರದೃಷ್ಟವೆಂದರೆ ನಾನು ಸ್ವಲ್ಪ ನಿಧಾನ. ಶಶಿ ಮಹಾರಾಜರಾದರೊ ಅಸಾಧಾರಣ ಚುರುಕು. ಅವರು ಒಂದು ಕ್ಷಣದಲ್ಲಿ ರಾಶಿ ಕೆಲಸ ಮಾಡಿಹಾಕುತ್ತಿದ್ದರು. ಅವರು ಎಲ್ಲ ವಿಧದಲ್ಲಿಯೂ ಮಹಾಪುರುಷರಾಗಿದ್ದರು. ಹೇಗೆ ಬೈಯಬೇಕೆಂಬುದೂ ಗೊತ್ತಿತ್ತು, ಹೇಗೆ ಪ್ರೀತಿಸಬೇಕೆಂಬುದೂ ಅವರಿಗೆ ಗೊತ್ತಿತ್ತು. ನೈವೇದ್ಯ ಮುಗಿದಕೂಡಲೆ ತುಂಬ ಚೆನ್ನಾದ ಮಿಠಾಯಿಗಳನ್ನು ತೆಗೆದುಕೊಂಡು, “ತಿನ್ನು, ಮಗು ತಿನ್ನು” ಎಂದು ಹೇಳುತ್ತಾ ಒಂದು ಕೈಯಿಂದ ಅವನ್ನೆಲ್ಲಾ ನನ್ನ ಬಾಯಿಗೆ ತುರುಕುತ್ತಿದ್ದರು, ಮತ್ತೊಂದು ಕೈಯಿಂದ ನನ್ನ ತಲೆಯನ್ನು ವಾತ್ಸಲ್ಯದಿಂದ ತಡವಿ ಸಾಂತ್ವನಗೊಳಿಸುತ್ತಿದ್ದರು.

ಸ್ವಾಮೀಜಿಯವರು ಆಗ ಆಲಂಬಜಾರ್ ಮಠದಲ್ಲಿ ಇದ್ದರು. ಅವರು ಗೀತೆ ಮತ್ತು ಉಪನಿಷತ್ತುಗಳ ಮೇಲೆ ಬೆಳಗ್ಗೆ ಒಂಭತ್ತು ಗಂಟೆಗೆ ಹಜಾರದಲ್ಲಿ ಅಥವಾ ಮಠದ ಹೊರಭಾಗದಲ್ಲಿ ಅದಕ್ಕೆ ಸೇರಿದಂತಿದ್ದ ವರಾಂಡದಲ್ಲಿ ಪಾಠ ಹೇಳುತ್ತಿದ್ದರು. ಕೆಲವು ವೇಳೆ ಅವರು ಪ್ರಶ್ನೋತ್ತರ ತರಗತಿಗಳನ್ನೂ ತೆಗೆದುಕೊಳ್ಳುತ್ತಿದ್ದರು. ಯುವ ಬ್ರಹ್ಮಚಾರಿಗಳು ಮತ್ತು ಸಾಧುಗಳು ಅದಕ್ಕೆ ಹೋಗುತ್ತಿದ್ದರು, ಏಕೆಂದರೆ ಪಾಠಗಳನ್ನು ವಿಶೇಷವಾಗಿ ಅವರಿಗೋಸ್ಕರವೇ ಮಾಡಲಾಗುತ್ತಿತ್ತು. ಸ್ವಾಮೀಜಿಯವರ ಗುರುಭಾಯಿಗಳೂ ಕುಳಿತುಕೊಂಡು ಕೇಳುತ್ತಿದ್ದರು. ಬಹುತೇಕ ತರಗತಿಗಳಿಗೆ ನಾನು ಹೋಗಲಾಗುತ್ತಿರಲಿಲ್ಲ. ಏಕೆಂದರೆ ಪೂಜಾಗೃಹದ ನನ್ನ ಕೆಲಸಗಳೆಲ್ಲವನ್ನೂ ಮಾಡಿ ಮುಗಿಸಲಾಗುತ್ತಿರಲಿಲ್ಲ. ಸ್ವಾಮೀಜಿಯವರ ಸೂಕ್ಷ್ಮವಾದ ಕಣ್ಣುಗಳು ಇದನ್ನು ಗಮನಿಸಿದವು. ಒಂದು ದಿನ ತರಗತಿಯ ಮಧ್ಯದಲ್ಲಿ ಅವರು ವಿಚಾರಿಸಿದರು: “ಕಾಲಿಕೃಷ್ಣ ಎಲ್ಲಿ? ಅವನೇಕೆ ಬರುವುದಿಲ್ಲ? ಹೋಗಿ ಅವನನ್ನು ಕರೆಯಿರಿ.” ಶಿಷ್ಯನೊಬ್ಬ ಬಂದು ನನಗೆ ತಿಳಿಸಿದನು. ನಾನು ಕೂಡಲೆ ಅವರನ್ನು ನೋಡಲು ಹೋದೆ. ನನ್ನನ್ನು ನೋಡಿದ ಕೂಡಲೆ ಅವರಿಗೆ ರೇಗಿತು. ಕೋಪದಿಂದ ಕೇಳಿದರು: “ನೀನೇಕೆ ಬರುವುದಿಲ್ಲ? ನೀನೇನು ಮಾಡುತ್ತಿದ್ದೆ? ನೆನೆಸಿದ ಕಾಳುಗಳ ತುದಿಯನ್ನು ಪೂಜಾಗೃಹಕ್ಕಾಗಿ ಒಂದೊಂದಾಗಿ ಕತ್ತರಿಸುತ್ತಿದ್ದೆಯಾ? ಶಶಿಯನ್ನು ಕರೆ.” ಶಶಿ ಮಹಾರಾಜರು ಬಂದಕೂಡಲೆ ಸ್ವಾಮೀಜಿಯವರು ಉದ್ರಿಕ್ತರಾಗಿ ಅವರ ಕಡೆ ಕೋಪ ಕಾರುತ್ತಾ ಹೇಳಿದರು: “ಏನು ಸಮಾಚಾರ, ಶಶಿ? ಇಲ್ಲಿ ಸೇರಿಕೊಂಡಿರುವ ಹುಡುಗರೆಲ್ಲರೂ ತಮ್ಮ ಮನೆ ಮುಂತಾದುವನ್ನೆಲ್ಲಾ ಬಿಟ್ಟು ಇಲ್ಲಿಗೆ ಬಂದಿರುವುದು ನಿಮ್ಮ ಠಾಕೂರರಿಗೋಸ್ಕರ ನಿನಗೆ ಬೇಕಾದ ಕಾಳುಗಳ ತೊಟ್ಟನ್ನು ಬಿಡಿಸಲು ಮಾತ್ರವೇ? ಅಂತಹುದನ್ನು ಸಹಿಸಲಾಗುವುದಿಲ್ಲ. ಎಲ್ಲರೂ ಕೂಡ ತಪ್ಪದೆ ಜಪ, ಧ್ಯಾನ, ಅಧ್ಯಯನಗಳನ್ನು ನಿಯಮಿತ ಕಾಲದಲ್ಲಿ ಯಾವ ವಿನಾಯಿತಿಯೂ ಇಲ್ಲದೆ ಮಾಡಬೇಕು. ತಿಳಿಯಿತೆ?” ಓಹ್, ಸ್ವಾಮೀಜಿಯವರ

ಮಾತುಗಳು! ಅವು ಹೇಗೆ ಮನಸ್ಸನ್ನೆಲ್ಲ ಕಲಕಿ ಹೃದಯವನ್ನು ಇರಿಯುತ್ತಿದ್ದವು! ಒಮ್ಮೆ ಹೊರಟಿತೆಂದರೆ, ಪದಗಳು ಪ್ರವಾಹದಂತೆ ಕೊನೆಯಿಲ್ಲದೆ ರಭಸದಿಂದ ಉಕ್ಕಿ ಹರಿಯುತ್ತಿದ್ದವು. ಈ ರೀತಿಯಾಗಿ ಅವರು ಕರ್ಣಕಠೋರವಾದ ಅನೇಕ ಪದಗಳಿಂದ ಮಾತನಾಡುತ್ತಾ ಹೋದರು. ಶಶಿ ಮಹಾರಾಜರು ತಲೆ ಬಗ್ಗಿಸಿಕೊಂಡು ನಿಂತಿದ್ದರು. ಅವರು ಎಲ್ಲವನ್ನೂ ತಾಳ್ಮೆಯಿಂದ ಕೇಳಿಸಿಕೊಂಡು, ಶಾಂತರಾಗಿ ಒಂದು ಮಾತನ್ನೂ ಆಡದೆ ಹೊರಟುಹೋದರು. ಅಲ್ಲಿಂದಾಚೆಗೆ ನಾನು ಪಾಠಕ್ಕೆ ಹೋಗಲು ಅನುಕೂಲವಾಗಲೆಂದು ನನ್ನ ಭಾಗದ ಕೆಲವು ಕೆಲಸಗಳನ್ನು ಅವರು ಹಂಚಿಕೊಂಡರು. ನಾನೂ ಕೂಡ ನನ್ನ ಎಲ್ಲ ಕೆಲಸಗಳನ್ನೂ ಮುಗಿಸಲು ಸರ್ವಪ್ರಯತ್ನ ಮಾಡುತ್ತಿದ್ದೆ.

ಕಾಲ ಉರುಳಿತು. ಕೆಲವು ದಿನಗಳು ಕಳೆದವು. ಆಗ ಸ್ವಾಮೀಜಿಯವರು ಶಶಿ ಮಹಾರಾಜರನ್ನು ಮದರಾಸಿಗೆ ಕಳುಹಿಸಲು ಯೋಚಿಸಿದರು. ಒಂದು ದಿನ ಅವರನ್ನು ಪಕ್ಕಕ್ಕೆ ಕರೆದು ಹೇಳಿದರು: "ನಾನು ಮದರಾಸಿನಲ್ಲಿ ಸ್ನೇಹಿತರಿಗೆ, ಶೀಘ್ರದಲ್ಲಿಯೇ ನನ್ನ ಗುರುಭಾಯಿಗಳಲ್ಲೊಬ್ಬರನ್ನು ಅಲ್ಲಿಗೆ ಕಳುಹಿಸುವೆನೆಂದು ಮಾತು ಕೊಟ್ಟಿರುವೆನು. ನಾನು ನಿನ್ನನ್ನು ಆರಿಸಿಕೊಂಡಿರುವೆನು. ನೀನು ಮದರಾಸಿಗೆ ಹೋಗಿ ನಮ್ಮ ನೆಚ್ಚಿನ ಠಾಕೂರರ ಹೆಸರಿನಲ್ಲಿ ಒಂದು ಮಠವನ್ನು ಸ್ಥಾಪಿಸಬೇಕು." ಶಶಿ ಮಹಾರಾಜರು ಯಾವ ನೆಪವನ್ನೂ ಒಡ್ಡಲಿಲ್ಲ. ಅವರು ಯಾವ ಆಕ್ಷೇಪಣೆಯನ್ನೂ ಮಾಡಲಿಲ್ಲ. ಅವರು ಎಷ್ಟು ನಿಷ್ಠರಾಗಿದ್ದರು! ಹನ್ನೆರಡು ವರ್ಷಗಳ ದೀರ್ಘಕಾಲ ಅವರು ಶ್ರೀರಾಮಕೃಷ್ಣರ ಅವಶೇಷವನ್ನು ಸತತವಾಗಿ ಕಾದಿದ್ದರು. ಅದು ಎಡೆತಡೆಯಿಲ್ಲದ ಅವಿರತ ಸೇವೆಯಾಗಿತ್ತು. ಆ ಅತಿಮುಖ್ಯವಾದ ಒಂದು ದಶಕಕ್ಕೂ ಮೀರಿದ ಅವಧಿಯಲ್ಲಿ, ತಾವು ಯಾರನ್ನು ಅಷ್ಟು ಶ್ರದ್ಧಾಭಕ್ತಿಯಿಂದ ಜೀವಂತ ಸಾನ್ನಿಧ್ಯದಂತೆ ಪೂಜಿಸಿದ್ದರೋ ಅವರ ಪೂಜಾಗೃಹವನ್ನು ಬಿಟ್ಟು ಹೋಗಬೇಕಾಗುವುದೆಂದು, ಅವರು ಒಂದು ಸ್ಥಳವನ್ನು ನೋಡಲೂ ಹೋಗಿರಲಿಲ್ಲ. ಗುರುವಿನಲ್ಲಿ ಅವರಿಗೆ ಎಂತಹ ಜೀವಂತ ಶ್ರದ್ಧೆಯಿತ್ತು! ಠಾಕೂರರ ಸೇವೆಯೊಂದಲ್ಲದೆ ಅವರಿಗೆ ಬೇರೇನೂ ಗೊತ್ತಿರಲಿಲ್ಲ. ಸ್ವಾಮೀಜಿಯವರ ಕೋರಿಕೆಯನ್ನು ಅವರು ಠಾಕೂರರ ಆಣತಿಯೆಂದು ಸ್ವೀಕರಿಸಿದರು. ಆ ಕೋರಿಕೆಗೆ ಅವರು ತಲೆಬಾಗಿ ಮದರಾಸಿಗೆ ಹೊರಡಲು ತಕ್ಷಣವೇ ಸಿದ್ಧರಾದರು. ಸ್ವಾಮೀಜಿಯವರ ಮೇಲೆ ಪ್ರೇಮ ಮತ್ತು ಅಭಿಮಾನ ಎಷ್ಟು ಅಗಾಧ ಮತ್ತು ಗಾಢವಾದುದು ಎಂಬುದನ್ನು ಇದರಿಂದ ಸುಲಭವಾಗಿ ನೋಡಬಹುದು. ಅವರು ಸ್ವಾಮೀಜಿಯವರ ಕರೆಗೂ ಶ್ರೀರಾಮಕೃಷ್ಣರ ಕರೆಗೂ ಯಾವ ಭೇದವನ್ನೂ ಮಾಡುತ್ತಿರಲಿಲ್ಲ. ಆದುದರಿಂದ ಸ್ವಾಮೀಜಿಯವರ ಆಣತಿಗೆ ತಮ್ಮ ಮನಃಪೂರ್ವಕವಾದ ಮತ್ತು ನಿಸ್ಸಂಕೋಚವಾದ ವಿಧೇಯತೆಯನ್ನು ನೀಡಲು ಅವರಿಗೆ ಸಾಧ್ಯವಾಯಿತು.

ಶಶಿ ಮಹಾರಾಜರೊಂದಿಗೆ ನನ್ನ ಕೊನೆಯ ಭೇಟಿ ಆದುದು ೧೯೦೧ ಮತ್ತು ೧೯೦೫ರ ನಡುವೆ. ಅವರು ಬೇಲೂರು ಮಠಕ್ಕೆ ಅಲ್ಪಕಾಲದ ಭೇಟಿಗಾಗಿ ಮದರಾಸಿನಿಂದ ಬಂದರು. ಅವರಿಂದ ನಾನು ಅಂದಿನ ಹಳೆಯ ಸುದಿನಗಳಲ್ಲಿ ಎಂತಹ ವಾತ್ಸಲ್ಯಪೂರ್ವಕ ವಿಶ್ವಾಸ ಮತ್ತು ಪ್ರೇಮವನ್ನು ಪಡೆಯುತ್ತಿದ್ದೆನೋ ಅದೇ ಪ್ರೀತಿ ವಿಶ್ವಾಸಗಳನ್ನು ನನಗೆ ತೋರಿದರು. ಅವರು ಕಾಲವಾಗುವುದಕ್ಕೆ ಮುಂಚೆ, ಚಿಕಿತ್ಸೆಗಾಗಿ ಬಾಗ್‌ಬಜಾರಿನಲ್ಲಿ ಶ್ರೀಮಾತೆಯವರ ಮನೆಯಲ್ಲಿದ್ದರು. ಆದರೆ ಆಗ ನಾನು ಮಾಯಾವತಿಯಲ್ಲಿ ಅದ್ವೈತ ಆಶ್ರಮದ ಮುಖ್ಯಸ್ಥನಾಗಿ ದೂರದ ಪರ್ವತದಲ್ಲಿದ್ದೆ. ಆದುದರಿಂದ ನಾನು ನನ್ನ ವಿವಿಧ ಕರ್ತವ್ಯಗಳು ಮತ್ತು ಅತಿಯಾದ ಜವಾಬ್ದಾರಿಗಳನ್ನು ಬಿಟ್ಟು ಬಂದು ಅವರು ಅಂತಿಮ ನಿದ್ರೆಗೆ ಹೋಗುವ ಮುನ್ನ ಅವರನ್ನು ನೋಡಬೇಕೆಂದು ಎಷ್ಟೇ ಕಾತುರನಾಗಿದ್ದರೂ ನೋಡಲಾಗಲಿಲ್ಲ. ಇಲ್ಲಿ ನಾನು ಅವರ ಶೀಲದ ಘನತೆಯನ್ನು ಕುರಿತು ಹೇಳಬಹುದು. "ಪ್ರಬುದ್ಧ ಭಾರತ"ದ ನನ್ನ ಸಂಪಾದಕತ್ವದ ಕಾಲದಲ್ಲಿ ಅವರ ತರಗತಿಗಳ ಮತ್ತು ಮದರಾಸಿನಲ್ಲಿ ಅವರು ಮಾಡಿದ ಉಪನ್ಯಾಸಗಳ ಟಿಪ್ಪಣಿಯನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲು ನನಗೆ ಕಳುಹಿಸುತ್ತಿದ್ದರು. ಅವನ್ನು ಸೂಕ್ತವಾಗಿ ಮಾರ್ಪಡಿಸಲು ನನಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತಿದ್ದರು. ಅವರ ಬರವಣಿಗೆಗೆ ಸೇರಿಸುವುದು, ಬಿಡುವುದು ಮತ್ತು ಮಾರ್ಪಡಿಸುವುದನ್ನು ನಾನು ಮಾಡಿದಾಗ ಹೃತ್ಪೂರ್ವಕವಾಗಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಇದು ಅವರ ಘನವಾದ ನಮ್ರತೆಯನ್ನು ತೋರುವುದು.

ಅನೇಕ ಮಧುರ ಸ್ಮೃತಿಗಳು ನನ್ನ ಮನಸ್ಸಿನ ಹಾಳೆಯ ಮೇಲೆ ಅವುಗಳ ಚಿರಮುದ್ರೆಯನ್ನೊತ್ತಿವೆ. ಅವು ನನ್ನ ನೆನಪಿನಲ್ಲಿ ಇನ್ನೂ ಹಸುರಾಗಿ ಸುಗಂಧದಿಂದ ಕೂಡಿವೆ. ಅವು ತೀರಾ ವೈಯಕ್ತಿಕವಾದುದರಿಂದ ಅವನ್ನು ಬಹಿರಂಗ ಪಡಿಸಲು ಸಂಕೋಚಪಡುವೆನು. ಅವುಗಳ ಗಾಢ ಪ್ರಾಮುಖ್ಯ ಪದಗಳಿಗೆ ಅತೀತವಾಗಿರುವುದರಿಂದ ಅವು ಅಭಿವ್ಯಕ್ತವಾಗದಿರುವುದೇ ಮೇಲು. ಅವು ನನ್ನ ಅಮೂಲ್ಯ ಆಸ್ತಿ. ನಮ್ಮ ಗೌರವಾನ್ವಿತ ಸ್ವಾಮಿಗಳು—ಶಶಿ ಮಹಾರಾಜರು ಎಷ್ಟು ಆಳವಾಗಿ ನನ್ನ ಜೀವನ ಮತ್ತು ಚೇತನವನ್ನು ರೂಪಿಸಿದರು ಎಂಬುದನ್ನು ಮಾನವ ಭಾಷೆಯಲ್ಲಿ ಎಂದಿಗೂ ತಿಳಿಸಲಾಗುವುದಿಲ್ಲ. ನನ್ನ ಪ್ರಾರಂಭಿಕ ಸಂನ್ಯಾಸ ಜೀವನದ ದಿನಗಳಲ್ಲಿ ಅವರ ವಿಶ್ವಾಸಪೂರ್ವಕ ಪ್ರೇಮ ಮತ್ತು ದೃಢವಾದ ನೆರವು ಇಲ್ಲದಿದ್ದರೆ, ಇಂದು ನಾನು ಏನಾಗಿರುವೆನೊ ಅದು ಸಾಧ್ಯವಾಗುತ್ತಿರಲಿಲ್ಲ. ಈ ಭಯಂಕರ ಜೀವನದ ಮರಳುಗಾಡಿನಲ್ಲಿ ನನ್ನ ಜೀವನದ ಪ್ರವಾಹ ಯಾವ ದಿಕ್ಕಿಗೆ ತಿರುಗುತ್ತಿತ್ತೊ ಮತ್ತು ಅದು ನನ್ನನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿತ್ತೊ ಬಲ್ಲವರಾರು?